# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 2085(2333) |
| **ಸದಸ್ಯರ ಹೆಸರು** | : | ಶ್ರೀ. ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| **ಉತ್ತರಿಸಬೇಕಾದ ದಿನಾಂಕ** | : | 27.03.2026 |
| **ಉತ್ತರಿಸುವ ಸಚಿವರು** | : | ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಕನ್ನಡ ಭವನಗಳನ್ನು ನಿರ್ಮಿಸಲಾಗಿದೆ; ಅದರ ನಿರ್ವಹಣೆ ಯಾರು ಮಾಡುತ್ತಿದ್ದಾರೆ; (ವಿವರ ನೀಡುವುದು); | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2015-16ನೇ ಸಾಲಿನಿಂದ ಇಲ್ಲಿಯವರೆಗೆ ಒಟ್ಟು ಹತ್ತು (10) ಸಾಂಸ್ಕೃತಿಕ ಭವನಗಳನ್ನು ನಿರ್ಮಿಸಲು ಅನುಮೋದನೆ ನೀಡಿದ್ದು, ವಿವರಗಳನ್ನು **ಅನುಬಂಧ-1ರಲ್ಲಿ** ನೀಡಲಾಗಿದೆ.<br>ಅನುದಾನ ಪಡೆದ ಸಂಸ್ಥೆಗಳೇ ತಮ್ಮ ಸ್ವಂತ ಹಣದ ಮೂಲಕ ನಿರ್ವಹಣೆ ಮಾಡಲು ಮುಚ್ಚಳಿಕೆ ಪತ್ರದಲ್ಲಿ ಒಪ್ಪಿಕೊಂಡಿದ್ದು, ಅದರಂತೆ ನಿರ್ವಹಣೆ ಮಾಡುತ್ತಿದ್ದಾರೆ. |
| ಆ) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೊಸದಾಗಿ ಕನ್ನಡ ಭವನ ನಿರ್ಮಾಣ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ; ಬಂದಿದ್ದಲ್ಲಿ, ಕಟ್ಟಡ ನಿರ್ಮಾಣ ಮಾಡಲು ಅನುದಾನ ಮಂಜೂರು ಮಾಡಲಾಗುವುದೇ; | 2024-25ನೇ ಸಾಲಿನಿಂದ ಇಲ್ಲಿಯವರೆಗೆ ಹೊಸದಾಗಿ ಸಾಂಸ್ಕೃತಿಕ ಭವನ ನಿರ್ಮಾಣಕ್ಕೆ ಯಾವುದೇ ಪ್ರಸ್ತಾವನೆಗಳು ಪ್ರಾಧಿಕಾರಕ್ಕೆ ಸ್ವೀಕೃತವಾಗಿರುವುದಿಲ್ಲ. |
| ಇ) | ಈ ಕನ್ನಡ ಭವನವನ್ನು ಯಾವ ಯಾವ ಕಾರ್ಯಕ್ರಮಕ್ಕಾಗಿ ನೀಡಲಾಗುವುದು; ಇದುವರೆಗೂ ಸರ್ಕಾರದ ಆದೇಶದಂತೆಯೇ ಕಾರ್ಯಕ್ರಮಗಳಿಗೆ ಅವಕಾಶ ನೀಡಲಾಗಿದೆಯೇ? (ವಿವರ ನೀಡುವುದು) | ಸಾಂಸ್ಕೃತಿಕ ಭವನಕ್ಕೆ ಅರ್ಜಿ ಸಲ್ಲಿಸುವ ಸಮಯದಲ್ಲಿ ಸಂಬಂಧಪಟ್ಟ ಸಂಸ್ಥೆಗಳು ಛಾಪಾ ಕಾಗದದಲ್ಲಿ ಮುಚ್ಚಳಿಕೆ ಸಲ್ಲಿಸಿ, ಸಾಂಸ್ಕೃತಿಕ ಭವನದಲ್ಲಿ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸೀಮಿತಗೊಳಿಸಿರುವ ಚಟುವಟಿಕೆಗಳನ್ನು ಮಾತ್ರ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ. ಒಂದುವೇಳೆ, ಮೇಲ್ಕಂಡ ಚಟುವಟಿಕೆಗಳನ್ನು ಹೊರತುಪಡಿಸಿ ಅನ್ಯ ಉದ್ದೇಶಕ್ಕೆ ಭವನವನ್ನು ಬಳಸಿಕೊಂಡಲ್ಲಿ ಗಡಿ ಜಿಲ್ಲಾಧಿಕಾರಿಗಳ ಹಂತದಲ್ಲಿಯೇ ಕಾನೂನು ರೀತ್ಯಾ ಸಂಸ್ಥೆಯ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಿ ಅನುದಾನವನ್ನು ಬಡ್ಡಿ ಸಮೇತ ಹಿಂಪಡೆಯುವುದಾಗಿ ಷರತ್ತು ವಿಧಿಸಲಾಗಿರುತ್ತದೆ. |

PDS 16 KBAD 2026

**(ಡಿ. ಸುಧಾಕರ್)**
ಸಚಿವರು
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ

# ಅನುಬಂಧ-1

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಜಿಲ್ಲೆ/ತಾಲ್ಲೂಕು ಹೆಸರು | ಮಂಜೂರಾತಿ ಪಡೆದ ಸಂಘ ಸಂಸ್ಥೆಯ ಹೆಸರು ಹಾಗೂ ವಿಳಾಸ | ಯೋಜನೆಯ ಹೆಸರು | ಅನುದಾನ ಬಿಡುಗಡೆ ಮಾಡಿದ ವಿವರ | | ಷರಾ |
|---|---|---|---|---|---|---|
| | | | | ಒಟ್ಟು ಮಂಜೂರಾದ ಅನುದಾನ | ಒಟ್ಟು ಬಿಡುಗಡೆ ಮಾಡಿದ ಮೊತ್ತ | |
| 1 | 2 | 3 | 4 | 5 | 6 | 7 |
| **2015-16** | | | | | | |
| 1 | ಮಂಗಳೂರು | ಶ್ರೀ ಕ್ಷೇತ್ರ ಪೆರಾರ ಮಹಾ ಸಂಸ್ಥಾನ, ಶ್ರೀ ಕ್ಷೇತ್ರ ಬ್ರಹ್ಮದೇವರು, ಬಲವಾಂಡಿ ವ್ಯಾಘ್ರ ಚಾಮುಂಡಿ ದೇವಸ್ಥಾನ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ (ಸಂಸ್ಥೆಯವರೇ ನಿರ್ವಹಿಸುತ್ತಾರೆ) | ಸಾಂಸ್ಕೃತಿಕ ಭವನದ ನಿರ್ಮಾಣ | 10.00 | 10.00 | ಪೂರ್ಣಗೊಂಡಿದೆ |
| 2 | ಪುತ್ತೂರು | ನವೋದಯ ಪ್ರೌಢಶಾಲೆ, ಬೆಟ್ಟಂಪಾಡಿ ಅಂಚೆ, ಪುತ್ತೂರು ತಾ॥, ದಕ್ಷಿಣ ಕನ್ನಡ ಜಿಲ್ಲೆ (ಸಂಸ್ಥೆಯವರೇ ನಿರ್ವಹಿಸುತ್ತಾರೆ) | ಸಾಂಸ್ಕೃತಿಕ ಭವನದ ನಿರ್ಮಾಣ | 10.00 | 10.00 | ಪೂರ್ಣಗೊಂಡಿದೆ |
| **2016-17** | | | | | | |
| 3 | ಮಂಗಳೂರು | ಕರ್ನಾಟಕ ರಾಜ್ಯ ದೇವಾಡಿಗರ ಸಂಘ(ರಿ) ಮಂಗಳೂರು ಸಂಚಾಲಿತ ಮಂಗಳ ವಿದ್ಯಾ ಕೇಂದ್ರ, ಗಾಂಧಿನಗರ ಮಂಗಳೂರು ತಾ॥, ದಕ್ಷಿಣ ಕನ್ನಡ ಜಿಲ್ಲೆ, (ಸಂಸ್ಥೆಯವರೇ ನಿರ್ವಹಿಸುತ್ತಾರೆ) | ಸಾಂಸ್ಕೃತಿಕ ಭವನದ ನಿರ್ಮಾಣ | 10.00 | 10.00 | ಪೂರ್ಣಗೊಂಡಿದೆ |
| **2019-20** | | | | | | |
| 4 | ಮಂಗಳೂರು | ಮಂಗಳೂರಿನಲ್ಲಿ ನಿರ್ಮಾಣಗೊಳ್ಳುತ್ತಿರುವ ತುಳು ಸಾಹಿತ್ಯ ಅಕಾಡೆಮಿ ಕಟ್ಟಡ ನಿರ್ಮಾಣ ಕಾಮಗಾರಿ (ಸಂಸ್ಥೆಯವರೇ ನಿರ್ವಹಿಸುತ್ತಾರೆ) | ತುಳು ಸಾಹಿತ್ಯ ಅಕಾಡೆಮಿ ಕಟ್ಟಡ ನಿರ್ಮಾಣ | 347.58 | 347.58 | ಪೂರ್ಣಗೊಂಡಿದೆ |
| 5 | ಮಂಗಳೂರು | ಮಂಗಳೂರಿನಲ್ಲಿ ನೂತನವಾಗಿ ನಿರ್ಮಿಸಲಿರುವ ಬ್ಯಾರಿ ಸಾಹಿತ್ಯ ಅಕಾಡೆಮಿ ಕಟ್ಟಡ ಕಾಮಗಾರಿ | ಬ್ಯಾರಿ ಸಾಹಿತ್ಯ ಅಕಾಡೆಮಿ ಕಟ್ಟಡ | 300.00 | - | ಕಾಮಗಾರಿಯನ್ನು ಆರಂಭಿಸಬೇಕಾಗಿದೆ |
| 6 | ಮಂಗಳೂರು | ಮಂಗಳೂರಿನಲ್ಲಿ ಕೊಂಕಣಿ ಸಾಹಿತ್ಯ ಅಕಾಡೆಮಿ ಕಟ್ಟಡ ನಿರ್ಮಾಣ ಕಾಮಗಾರಿಗಾಗಿ (ಸಂಸ್ಥೆಯವರೇ ನಿರ್ವಹಿಸುತ್ತಾರೆ) | ಕೊಂಕಣಿ ಸಾಹಿತ್ಯ ಅಕಾಡೆಮಿ ಕಟ್ಟಡ | 300.00 | 300.00 | ಕಾಮಗಾರಿ ಪೂರ್ಣಗೊಂಡಿರುವ ಬಗ್ಗೆ ಹಣಬಳಕೆ ಪ್ರಮಾಣ ಪತ್ರ ಬಂದಿರುವುದಿಲ್ಲ |
| 7 | ಮಂಗಳೂರು | ಮಂಗಳೂರಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಿರ್ಮಿಸುತ್ತಿರುವ ರಂಗಮಂದಿರದ ಮುಂದುವರೆದ ಕಾಮಗಾರಿಗಾಗಿ | ರಂಗ ಮಂದಿರ | 390.00 | 390.00 | ಲೋಕೋಪಯೋಗಿ ಇಲಾಖೆಯು ಕಾಮಗಾರಿಯನ್ನು ಆರಂಭಿಸಬೇಕಾಗಿದೆ |
| **2021-22** | | | | | | |
| 8 | ಬಂಟ್ವಾಳ | ಕನ್ನಡ ಸಾಹಿತ್ಯ ಪರಿಷತ್, ಕೈಕುಂಜೆ ರಸ್ತೆ, ಜೋಡುಮಾರ್ಗ ಅಂಚೆ, ಬಂಟ್ವಾಳ, ದಕ್ಷಿಣ ಕನ್ನಡ ಜಿಲ್ಲೆ. (ಸಂಸ್ಥೆಯವರೇ ನಿರ್ವಹಿಸುತ್ತಾರೆ) | ಸಾಂಸ್ಕೃತಿಕ ಭವನದ ನಿರ್ಮಾಣ | 5.00 | 5.00 | ಪೂರ್ಣಗೊಂಡಿದೆ |
| 9 | ಸುಳ್ಯ | ಶ್ರೀ ಶಾರದಾಂಬಾ ಯಕ್ಷಗಾನ ಕಲಾ ಸೇವಾ ಟ್ರಸ್ಟ್ (ರಿ), ಪಂಜ, ಐವತ್ತೊಕ್ಲು ಗ್ರಾಮ, ಪಂಜ ಅಂಚೆ, ಸುಳ್ಯ ತಾ॥, ದಕ್ಷಿಣ ಕನ್ನಡ ಜಿಲ್ಲೆ -574232. (ಸಂಸ್ಥೆಯವರೇ ನಿರ್ವಹಿಸುತ್ತಾರೆ) | ಸಾಂಸ್ಕೃತಿಕ ಭವನದ ನಿರ್ಮಾಣ | 5.00 | 5.00 | ಪೂರ್ಣಗೊಂಡಿದೆ |
| **2022-23** | | | | | | |
| 10 | ಸುಳ್ಯ | ಶ್ರೀ ಶಾರದಾಂಬ ಭಜನಾ ಮಂಡಳಿ(ರಿ), ಪಂಜ, ಐವತ್ತೊಕ್ಲು ಗ್ರಾಮ, ಸುಳ್ಯ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ. (ಸಂಸ್ಥೆಯವರೇ ನಿರ್ವಹಿಸುತ್ತಾರೆ) | ಸಾಂಸ್ಕೃತಿಕ ಭವನದ ನಿರ್ಮಾಣ | 30.00 | 30.00 | ಪೂರ್ಣಗೊಂಡಿದೆ |
| **ಒಟ್ಟು** | | | | **1407.58** | **1107.58** | |